ಅವಲೋಕನ

ಶಿಶಿರ ಹೆಗಡೆ ನ್ಯೂ ಜರ್ಸಿ

shishirh@gmail.com

ಸೂಕ್ಷ್ಮಾಣು ಜೀವಿಗಳೊಂದಿಗಿನ ಯುದ್ಧ ನಿತ್ಯ ನಿರಂತರ

ಅಮೆರಿಕದ ಮಿನ್ನೆಸೊಟಾದ ಬೆತ್ ಎಂಬ ಯುವತಿ ಹಾಂಕಾಂಗ್‌ಗೆ ವ್ಯಾಪಾರ ವ್ಯವಹಾರದ ನಿಮಿತ್ತ ಹೋಗಿರುತ್ತಾಳೆ. ಅಲ್ಲಿನ ಕೆಲಸ ಮುಗಿಸಿ ವಾಪಸ್ ಮಿನ್ನೆಸೊಟಾಗೆ ಮರಳಿ ಬಂದಾಗ ದೇಹದಲ್ಲಿ ಅಸ್ವಸ್ಥತೆ ಕಾಣಿಸಿಕೊಳ್ಳುತ್ತದೆ. ಪ್ರಪಂಚದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಪ್ರಯಾಣ ಮಾಡಿದಾಗ ಅಲ್ಲಿನ ದಿನ ರಾತ್ರಿಗೆ ದೇಹ ಹೊಂದಿಕೆಯಾಗಲು ಸಮಯ ಬೇಕಲ್ಲ, ಅದೇ ಕಾರಣಕ್ಕೆ ಜೆಟ್ ಲ್ಯಾಗ್ ನಿಂದಾಗಿ ದೇಹದಲ್ಲಿ ಯಡವಟ್ಟಾಗಿರಬೇಕು ಎಂದು ಸುಮ್ಮನೆ ಅನಾರೋಗ್ಯವನ್ನು ನಿರ್ಲಕ್ಷಿಸುತ್ತಾಳೆ. ಮುಂದಿನ ಎರಡೇ ದಿನಕ್ಕೆ ಬೆತ್ ಸತ್ತು ಹೋಗುತ್ತಾಳೆ. ಪತಿ ಗಾಬರಿಯಾಗುತ್ತಾನೆ, ಡಾಕ್ಟರ್‌ಗೆ ಆಕೆ ಸತ್ತದ್ದು ಯಾಕೆ ಮತ್ತು ಹೇಗೆ ಎಂಬುದು ತಿಳಿಯುವುದಿಲ್ಲ. ಮುಂದಿನ ಕೆಲವೇ ದಿನಗಳಲ್ಲಿ ಇದೇ ರೀತಿ ಬಹಳಷ್ಟು ಮಂದಿ ಸತ್ತುಬೀಳುತ್ತಾರೆ. Contagion ಎಂಬ ಒಂದು ಹಾಲಿವುಡ್ ಚಲನಚಿತ್ರ ಶುರುವಾಗುವುದು ಹೀಗೆ. ನೀವು ಒಮ್ಮೆ ಈ ಚಲನಚಿತ್ರವನ್ನು ನೋಡಲೇ ಬೇಕು, ಹಾಗಾಗಿ ಮುಂದಿನ ಕಥೆಯನ್ನು ಹೇಳದೆ ಇಲ್ಲಿಗೆ ನಿಲ್ಲಿಸುತ್ತೇನೆ.

ಆಪಲ್ ಟಿವಿಯಲ್ಲಿ ಒಂದು ಧಾರಾವಾಹಿಯಿದೆ. ಧಾರಾವಾಹಿ ಎಂದು ಕನ್ನಡದಲ್ಲಿ ಹೇಳಿ ತಪ್ಪು ಕಲ್ಪನೆ ಕೊಡುವುದಕ್ಕಿಂತ ಸೀರೀಸ್ ಎಂದು ಹೇಳಿದರೆ ಸರಿ ಅನಿಸುತ್ತದೆ. ಅದರ ಹೆಸರು 'SEE'. ಹೆಸರೇ 'ನೋಡು' ಎಂಬ ಅರ್ಥ. ಇದು ಭವಿಷ್ಯತ್ತಿನ ಕತೆ. ಇಡೀ ಮನುಕುಲವೇ ವೈರಸ್ ಒಂದರ ದಾಳಿಯಿಂದಾಗಿ ಕಣ್ಣನ್ನು ಕಳೆದುಕೊಂಡು ಬಿಡುತ್ತದೆ. ಇಡೀ ಜಗತ್ತಿನಲ್ಲಿ ಯಾರಿಗೂ ಕಣ್ಣೇ ಕಾಣಿಸುವುದಿಲ್ಲ. ಕ್ರಮೇಣ ಮನುಷ್ಯನ ಸಂಖ್ಯೆ ಕೂಡ ಕ್ಷೀಣಿಸಿರುತ್ತದೆ. ಒಂದೆರಡು ತಲೆಮಾರು ಕಳೆದ ನಂತರ ಕಣ್ಣಿಲ್ಲದ ಮನುಷ್ಯ ಬದುಕಿಗೆ ಹೊಂದಿಕೊಂಡುಬಿಡುತ್ತಾನೆ. ಇಂದಿನ ಎಲ್ಲ ಆಧುನಿಕ ಆಡಂಬರಗಳೆಲ್ಲ ಗತಕಾಲದ ವೈಭವದಂತೆ. ಎಲ್ಲಿ ನೋಡಿದರಲ್ಲಿ ಪ್ಲಾಸ್ಟಿಕ್ ಚೀಲಗಳು, ಹಳೆಯ ಡ್ಯಾಂ, ಬಿದ್ದು ಹೋದ ಕಟ್ಟಡಗಳ ಮಧ್ಯೆ, ಮನುಷ್ಯ ಡಿಟ್ಟೋ ಆದಿ ಮಾನವನಂತೆ ಬದುಕುತ್ತಾನೆ. ಅಲ್ಲಿ ಒಬ್ಬನಿಗೆ ದೃಷ್ಟಿ ಮರುಕಳಿಸಿಬರುತ್ತದೆ. ಬಹಳ ಮಜವಾದ ಕಥೆ ಮತ್ತು ಕಲ್ಪನೆ.

ಹೀಗೆ ಈ ರೀತಿಯ ಹತ್ತಾರು 'ಇದೆಲ್ಲ ಸತ್ಯವಾಗಿ ಬಿಡಬಹುದೇನೋ' ಎನ್ನುವ ಚಲನಚಿತ್ರಗಳು ಹಾಲಿವುಡ್‌ನಲ್ಲಿ ಬಂದು ಹೋಗಿವೆ. ಇವೆಲ್ಲವೂ ಮುಂದೊಂದು ದಿನ ನಿಜವಾಗಬಹುದೇನೋ ಎಂದು ನಂಬಿಸಿ ಬಿಡುವಷ್ಟು ಸಾದೃಶ. ಈ ಚಿತ್ರ ಧಾರಾವಾಹಿಗಳನ್ನು ನೋಡಿದಾಗಲೆಲ್ಲ ಒಂದು ಹೆದರಿಕೆ ಹುಟ್ಟುತ್ತದೆ. ನಾವು 'ಅಯ್ಯೋ ಇದೆಲ್ಲ ಸಿನಿಮಾದಲ್ಲಿ ಮಾತ್ರ' ಎಂದು ಅಂದುಕೊಂಡರೆ ಮಾತ್ರ ಸಮಾಧಾನ. ಇಲ್ಲದಿದ್ದರೆ ನಿಮ್ಮ ತಲೆಯಲ್ಲೊಂದು ವೈರಸ್ ಬಿಟ್ಟುಕೊಂಡಂತೆ.

ಯಾಕೋ ಈಗ ಕೆಲ ದಿನಗಳಿಂದ ಕರೋನಾ ವೈರಸ್‌ನ ಸುದ್ದಿ ಕೇಳಿದಾಗಲೆಲ್ಲ ಈ ಚಿತ್ರಗಳು ಕಣ್ಣೆದುರಿಗೆ ಧುತ್ತನೆ ಬಂದು ನಿಲ್ಲುತ್ತಿದೆ. ಇದು ನಿಮಗೆ ಕೂಡ ಅನುಭವಕ್ಕೆ ಬಂದಿರಬಹುದು. ಹಾಗಾದರೆ ಇದೆಲ್ಲ ಆಗಲು ಸಾಧ್ಯವೇ? ಮುಂದೊಂದು ದಿನ ಮನುಕುಲವೇ ಈ ರೀತಿ ಒಂದು ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ದೊಡ್ಡದೊಂದು ಅನಾಹುತಕ್ಕೆ ಕಾರಣವಾಗಬಹುದೇ? ಸಾಧ್ಯತೆ ಕಡಿಮೆಯಿರಬಹುದು. ಆದರೆ ಅಸಾಧ್ಯ ಅಥವಾ ಹಾಗೆ ಆಗಲು ಸಾಧ್ಯವೇ ಇಲ್ಲ ಎಂದು ಮಾತ್ರ ಹೇಳುವಂತಿಲ್ಲ.

'Measles' ದಡಾರ ರೋಗದ ಹೆಸರು ಕೇಳಿರಬಹುದು. ಈ ರೋಗಕ್ಕೆ ತುತ್ತಾಗುವವರು ಇಂದು ತೀರಾ ಕಡಿಮೆ. ಈ ರೋಗಕ್ಕೆ ಲಸಿಕೆ ಕೂಡ ಇದೆ. ಆದರೆ ಈ ರೋಗ ಹರಡುವ ರೀತಿ ಹೇಗೆ ಗೊತ್ತೆ? ದಡಾರಕ್ಕೆ ಕಾರಣ ಮೀಸಲ್ಸ್ ವೈರಸ್. ಒಂದು ವೇಳೆ ಜಗತ್ತಿನಲ್ಲಿ ಯಾರೂ ಕೂಡ ಈ ರೋಗಕ್ಕೆ ಲಸಿಕೆ ತೆಗೆದುಕೊಂಡಿಲ್ಲ ಎಂದಿಟ್ಟುಕೊಳ್ಳಿ. ಒಬ್ಬ ದಡಾರ ಇರುವ ವ್ಯಕ್ತಿ ಸುಮಾರು ಹದಿನೈದು ಜನಕ್ಕೆ ಈ ರೋಗವನ್ನು ಹರಡಬಲ್ಲ. ಒಬ್ಬ ದಡಾರ ರೋಗಿ ಮೂವತ್ತು ಮೀಟರ್ ದೂರದಲ್ಲಿರುವ ಇನ್ನೊಬ್ಬನಿಗೆ ಈ ರೋಗವನ್ನು ಹರಡಬಲ್ಲ. ಅದಲ್ಲದೆ ದಡಾರವಿರುವ ರೋಗಿ ಒಂದು ಜಾಗದಲ್ಲಿ ನಿಂತು ಹೋದ ಸುಮಾರು ನಾಲ್ಕು ತಾಸಿನ ನಂತರ ಆ ಜಾಗಕ್ಕೆ ಬರುವ ಇನ್ನೊಬ್ಬನಿಗೆ ಈ ರೋಗ ಅಂಟಿಕೊಳ್ಳಬಹುದು. ದಡಾರಕ್ಕೆ ಲಸಿಕೆಯೇ ಇಲ್ಲದಿದ್ದರೆ ಇಂದು ಜಗತ್ತಿನ ಎಲ್ಲರಿಗೂ ದಡಾರವಿರುತ್ತಿತ್ತೇನೋ! ಗೊತ್ತಿಲ್ಲ. ಇದು ಒಂದು ವೈರಸ್‌ನ ಕಥೆ.

ಸಾಂಕ್ರಾಮಿಕ ರೋಗಗಳು ನಿನ್ನೆ ಮೊನ್ನೆಯದಲ್ಲ. ಇತಿಹಾಸದುದ್ದಕ್ಕೂ ಒಂದಿಲ್ಲೊಂದು ದೊಡ್ಡ ರೋಗ ಮನುಷ್ಯನನ್ನು ನಿರ್ಮಾನುಷವಾಗಿ ಕೊಂದಿದೆ. ತೀರಾ ಇತ್ತೀಚಿಗೆ ಬಂದ ಸಾಂಕ್ರಾಮಿಕ ರೋಗಗಳಲ್ಲಿ ಸತ್ತವರ ಸಂಖ್ಯೆಯನ್ನು ಇತಿಹಾಸದಲ್ಲಿ ನಮೂದಿಸಿಕೊಳ್ಳುವ ಕೆಲಸವಾಗುತ್ತಿದೆ. ಮೊದಲೆಲ್ಲ ಸತ್ತವರ ಸಂಖ್ಯೆ ಲೆಕ್ಕಕ್ಕೆ ಇಲ್ಲ – ಅವೆಲ್ಲ ಇಂದು ಅಂದಾಜು ಅಷ್ಟೇ. 13ನೇ ಶತಮಾನದಲ್ಲಿ ಯುರೋಪ್ ಮತ್ತು ಏಷ್ಯಾದಲ್ಲಿ ಪ್ಲೇಗ್ ಕೊಂದಷ್ಟು ಜನರನ್ನು ಯಾವುದೇ ರೋಗ ಕೊಂದಿಲ್ಲ ಎನ್ನುವುದು ಗತ. ಒಂದು ಅಂದಾಜಿನ ಪ್ರಕಾರ ಪ್ಲೇಗ್‌ಗೆ ಸತ್ತವರ ಸಂಖ್ಯೆ ಸುಮಾರು 7.5 ರಿಂದ 20 ಕೋಟಿ. ಇತಿಹಾಸದಲ್ಲಿ ದರಜ್ ಆಗಿರುವ ಅತಿ ದೊಡ್ಡ ಸಾಂಕ್ರಾಮಿಕ ರೋಗ ಪ್ಲೇಗ್. ಇಂದು ಪ್ಲೇಗ್ ರೋಗಕ್ಕೆ ಸಾಯುವವರಿಲ್ಲ ಆದರೆ ಆ ಕಾಲಕ್ಕೆ ಇಡೀ ಜಗತ್ತನ್ನೇ ಈ ಒಂದು ರೋಗ ನಡುಗಿಸಿಬಿಟ್ಟಿತ್ತು. ಯುರೋಪ್ ಅಕ್ಷರಶಃ ಸ್ಮಾಶಾನವಾದ ಕಾಲವದು. ಅಲ್ಲಿನ ಶೇ.30 ರಿಂದ ಶೇ.60 ಜನಸಂಖ್ಯೆಯೇ ಕಡಿಮೆಯಾಯಿತು ಎಂದರೆ ನೀವೇ ಊಹಿಸಿಕೊಳ್ಳಿ. ಅದೇ ಕಾರಣಕ್ಕೆ ಪ್ಲೇಗ್ ಅನ್ನು 'ಬ್ಲಾಕ್ ಡೆತ್' ಎಂದು ಕರೆಯಲಾಗುತ್ತದೆ. ಇದರ ಕರಾಳತೆ ನಮಗೆ ಇಂದು ಅಂದಾಜಿಸಲು ಕೂಡ ಸಾಧ್ಯವಿಲ್ಲ. ಇಡೀ ಯುರೋಪ್‌ನ ಆರ್ಥಿಕತೆಯಿಂದ ಹಿಡಿದು ಎಲ್ಲಕ್ಕೆಲ್ಲವೂ ಬುಡಮೇಲು ಮಾಡಿದ್ದು ಈ ಒಂದು ರೋಗ. ಸುಮಾರು ಮುನ್ನೂರು ವರ್ಷಗಳ ಕಾಲ ಮನುಷ್ಯನನ್ನು ಭಯದಲ್ಲಿಯೇ ಬದುಕುವಂತೆ ಮಾಡಿದ್ದು ಇದೇ ರೋಗ. ಪ್ಲೇಗ್ ಇತಿಹಾಸದ ಪ್ರಕಾರ ಮೂರು ಬಾರಿ ಮರುಕಳಿಸಿದೆ. 18ನೇ ಶತಮಾನದಲ್ಲಿ ಭಾರತ ಕೂಡ ಇದಕ್ಕೆ ತತ್ತರಿಸಿದ್ದು ನಾವು ಇತಿಹಾಸದಲ್ಲಿ ಓದಿದ್ದೇವೆ. ಭಾರತದಲ್ಲಿ ಪ್ಲೇಗ್ ನಿಂದ ಸತ್ತವರ ಸಂಖ್ಯೆ ಬರೋಬ್ಬರಿ ಒಂದು ಕೋಟಿ. ಆಗ ಭಾರತದಲ್ಲಿ ಇದ್ದ ಜನಸಂಖ್ಯೆ ಸುಮಾರು 28 ಕೋಟಿ. ಇದೇ ಕಾರಣಕ್ಕೆ ಈ ರೋಗಕ್ಕೆ ಇಂದಿಗೂ ನಾವು ಕರೆಯುವುದು 'ಮಹಾ ಮಾರಿ' ಎಂದು.

ಇದೇ ರೀತಿ ಭಾರತದ ಇತಿಹಾಸದ ದಿಕ್ಕನ್ನು ಬದಲಿಸಿದ ಇನ್ನೊಂದು ರೋಗ ಫ್ಲೂ. 19ನೇ ಶತಮಾನದ ಆದಿಯಲ್ಲಿ ದೇಶಕ್ಕೆ ದೇಶವೇ ಕಂಗಾಲಾಗಿ ಹೋದದ್ದು ಒಂದು ಫ್ಲೂ ಇಂದಾಗಿ. ಇದರ ತೀವ್ರತೆ ಎಷ್ಟಿತ್ತೆಂದರೆ ಬಹಳಷ್ಟು ಬ್ರಿಟೀಷ್ ಅಧಿಕಾರಿಗಳು ಭಾರತ ಬಿಟ್ಟು ಓಡಿದ್ದರು. ಇದರ ಪರಿಣಾಮ ಸ್ವಾತಂತ್ರ್ಯ ಹೋರಾಟದ ಮೇಲೆ ಕೂಡ ಆಗಿತ್ತು. ಅಂದು ಆ ಸಮಯದಲ್ಲಿ ಗಾಂಧೀಜಿಯವರು ಕೂಡ ಜ್ವರದಿಂದ ಬಳಲಿದ್ದರು. ಅವರ ಆರೋಗ್ಯ ಅದೆಷ್ಟು ಕೆಟ್ಟಿತ್ತೆಂದರೆ ಅವರು ತಮ್ಮ ಆತ್ಮಕಥೆಯಲ್ಲಿ ಈ ಒಂದು ವಾಕ್ಯವನ್ನು ನಮೂದಿಸಿದ್ದಾರೆ All interest in living had ceased,. ಇತಿಹಾಸದಲ್ಲಿ ಇಂತಹ ಹಲವಾರು ರೋಗಗಳು ಬಂದು ಹೋಗಿವೆ. ಎಲ್ಲಿಲ್ಲದಂತೆ ಕಾಡಿ, ಗಾಬರಿಗೊಳಿಸಿ ಇತಿಹಾಸದ ಪುಟ ಸೇರಿವೆ. ಆಗೀಗ 'ನಾವಿನ್ನೂ ಬದುಕಿದ್ದೇವೆ' ಎಂದು ಈ ವೈರಸ್‌ಗಳು, ಸೂಕ್ಷ್ಮಾಣು ಜೀವಿಗಳು ಅಲ್ಲಲ್ಲಿ ಮತ್ತೆ ಮತ್ತೆ ಮರುಕಳಿಸುವ ಮೂಲಕ ಸುದ್ದಿ ಮಾಡಿದ್ದು ಕೂಡ ಇದೆ. ಕಾಲರಾ,ಫ್ಲೂ, ಟಿಬಿ, ಕುಷ್ಠರೋಗ ಈ ಎಲ್ಲ ರೋಗಗಳು ಇಂದು ಹದಕ್ಕೆ ಬಂದು ನಿಂತಿವೆ. ಮನುಷ್ಯನ ನಿಯಂತ್ರಣದಲ್ಲಿವೆ. ಇನ್ನು ಕೆಲ ರೋಗಗಳು ನಿರಂತರವಾಗಿ ಒಂದು ಹಂತದಲ್ಲಿ ಬದುಕಿಕೊಂಡಿವೆ. HIV ಏಡ್ಸ್ ಹೆಸರು ಇಂದು ನಮಗೆಲ್ಲ ಗೊತ್ತು. ಆದರೆ ಇದರ ವ್ಯಾಪಕತೆ ಇಂದು ಹೆಚ್ಚಿನ ಪತ್ರಿಕೆಗಳು ವಾಹಿನಿಗಳು ಸುದ್ದಿ ಮಾಡುವುದೇ ಬಿಟ್ಟಿವೆ. ಆದರೆ ನಿಮಗೆ ತಿಳಿದಿರಲಿ, ದಕ್ಷಿಣ ಮತ್ತು ಪೂರ್ವ ಆಫ್ರಿಕಾದಲ್ಲಿ ಏಡ್ಸ್‌ನ ವ್ಯಾಪಕತೆ ಗಾಬರಿ ಹುಟ್ಟಿಸುವಂತದ್ದು. ಇಂದು ಆ ಭಾಗದಲ್ಲಿ ನಾಲ್ಕರಲ್ಲಿ ಒಬ್ಬರಿಗೆ ಏಡ್ಸ್ ಸೋಂಕಿದೆ. ಅದರರ್ಥ ಸುಮಾರು ಶೇ.25ರಷ್ಟು ಮಂದಿ ಏಡ್ಸ್ ರೋಗ ಪೀಡಿತರು. ಇಂತಹ ಮಹಾಮಾರಿ ರೋಗದ ಸಾಲಿಗೆ ಇತ್ತೀಚೆಗೆ ಬಂದು ಸೇರಿದ್ದು ಈ H1N1, ಜೈಕಾ ವೈರಸ್, ಎಬೋಲಾ ಮೊದಲಾದವುಗಳು. ಇವೆಲ್ಲ ರೋಗಗಳು ಹಿಂದೆಂದೂ ಇರಲಿಲ್ಲ ಎನ್ನುವಂತಿಲ್ಲ. ಈ ರೋಗಗಳು ಆಗಾಗ ಬಂದು ಮತ್ತೊಂದಿಷ್ಟು ಕಾಲ ಸುಪ್ತವಾಗಿ ಬಿಡುತ್ತವೆ.

ಈಗ ಸುದ್ದಿಯಲ್ಲಿರುವುದು ಕರೋನಾ. ಚೀನಾದಂತಹ ದೇಶದಲ್ಲಿ ಈ ರೋಗ ಹುಟ್ಟಿದ್ದು ಪುಣ್ಯ ಎಂದು ಹೇಳುವುದಕ್ಕಿಂತ ಇನ್ನೆಲ್ಲಿ ಹುಟ್ಟಿದ್ದರೂ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿಬಿಡುತ್ತಿತ್ತು ಎನ್ನಬಹುದು. ಒಂದು ವೈರಸ್ ಇಡೀ ಒಂದು ಕೋಟಿಯಷ್ಟು ಜನರಿರುವ ಊರನ್ನೇ ಜೈಲಾಗಿಸಿಬಿಟ್ಟಿತು. ನಗರಕ್ಕೆ ನಗರವನ್ನೇ ಬೀಗ ಜಡಿದುಬಿಡುವ ಇಂಥದ್ದೊಂದು ಕಟ್ಟುನಿಟ್ಟಿನ ಹೆಜ್ಜೆ ಚೀನಾಗೆ ತೆಗೆದುಕೊಳ್ಳಲೇ ಬೇಕಿತ್ತು. ಇದು ಕೇವಲ ಚೀನಾದಂತಹ ಏಕ ಪಕ್ಷದ ರಾಷ್ಟ್ರಕ್ಕೆ ಮಾತ್ರ ಮಾಡಲು ಸಾಧ್ಯ. ಇದೇ ರೋಗ ಭಾರತದಲ್ಲಿನ ಒಂದು ಮಹಾ ನಗರದಲ್ಲಿ ದುರದೃಷ್ಟವಶಾತ್ ಹುಟ್ಟಿದ್ದಿದ್ದರೆ ಚೀನಾದ ನಾಲ್ಕು ಪಟ್ಟು ಜನ ಸತ್ತಿರುತ್ತಿದ್ದರೇನೋ. ಇಷ್ಟೊತ್ತಿಗಾಗಲೇ ರಾಜಕೀಯ ಪಕ್ಷದ ನೇತಾರರು ದಿನಕ್ಕೊಂದು ಹೇಳಿಕೆ ಕೊಟ್ಟು ಇನ್ನಷ್ಟು ಅವಾಂತರ ಸೃಷ್ಟಿಸಿರುತ್ತಿದ್ದರೇನೋ. ಪುಣ್ಯವಶಾತ್ ಈ ರೋಗ ಭಾರತದಲ್ಲಿ ಹುಟ್ಟಲಿಲ್ಲ. ಆದರೆ ಇದೇ ಸಮಯದಲ್ಲಿ ನಾವೆಷ್ಟು ಇಂತಹ ಸಾಂಕ್ರಾಮಿಕ ರೋಗಕ್ಕೆ ಸಿದ್ಧರು ಎಂಬ ಪ್ರಶ್ನೆ ಏಳುತ್ತದೆ ಕೂಡ. ನಾವು ಮಹಾನಗರಗಳ ನೀರಿನ ಮೂಲಗಳನ್ನು ಕುಲಗೆಡಿಸಿ ಆಗಿದೆ. ಇಲ್ಲಿನ ವಾಯು ಮಾಲಿನ್ಯ ವಿಪರೀತವಾಗಿದೆ. ಸುಮ್ಮನೆ ದೆಹಲಿಯ ಹವಾಮಾನವನ್ನು ಅಪ್ಲಿಕೇಶನ್‌ನಲ್ಲಿ ನೋಡಿದರೆ ಅದರಲ್ಲಿ ಕೂಡ ಹವಾಮಾನದ ವಿಪರೀತವನ್ನು 'ಬದುಕಲು ಯೋಗ್ಯವಲ್ಲದ ಗಾಳಿ' ಎಂದು ತೋರಿಸುವ ಮಟ್ಟಿಗೆ ಪರಿಸ್ಥಿತಿ ಬಂದು ನಿಂತಿದೆ. ಹೀಗೆಲ್ಲವಿರುವಾಗ ನಮ್ಮಲ್ಲಿ ಕೂಡ ಇಂಥದ್ದೊಂದು ಕೇಳರಿಯದ ರೋಗ ಹುಟ್ಟಬಲ್ಲದು ಎನ್ನುವ ವಾದವನ್ನು ಅಲ್ಲಗಳೆಯುವಂತಿಲ್ಲವಲ್ಲ. ಹಾಗೊಮ್ಮೆ ಒಂದು ಮಹಾ ರೋಗ ಹುಟ್ಟಿದ್ದೇ ಆದಲ್ಲಿ, ಅದು ಒಂದು ವೇಳೆ ಹರಡುವಲ್ಲಿ ತೀವ್ರತೆ ಇದ್ದಲ್ಲಿ, ಅದಕ್ಕೊಂದು ಮದ್ದು ಹುಡುಕುವಲ್ಲಿ ಸ್ವಲ್ಪ ವಿಳಂಬವಾದಲ್ಲಿ ಅಂದಿನ ಯುರೋಪ್‌ನಲ್ಲಿನ ಪ್ಲೇಗ್‌ನಂತಹ ಪರಿಸ್ಥಿತಿ ನಮ್ಮಲ್ಲಿ ಕೂಡ ಆಗಬಹುದು. ಇದಕ್ಕೆ ನಾವೆಷ್ಟು ತಯಾರಿ ಎನ್ನುವುದು ಈಗಿರುವ ನಮ್ಮ ಮುಂದಿನ ಪ್ರಶ್ನೆ.

ವೈರೊಲೊಜಿ ಬ್ಲಾಗ್‌ನ ಪ್ರಕಾರ ಸುಮಾರು ಮುರೂವರೇ ಲಕ್ಷ ವೈರಸ್‌ಗಳು ಸಸ್ತನಿಗಳಿಗೆ ರೋಗ ತರಬಹುದು ಎಂದು ಇಲ್ಲಿಯವರೆಗೆ ಗುರುತಿಸಲಾಗಿದೆ. ಒಟ್ಟಾರೆ ಸಮುದ್ರದಲ್ಲಿರುವ ವೈರಸ್‌ನ ಸಂಖ್ಯೆ ಹತ್ತರ ಮೂವತ್ತೊಂದನೇ ಘಾತ. ಇದರಲ್ಲಿ ಯಾವುದೇ ಒಂದು ವೈರಸ್ ರೂಪಾಂತರಗೊಂಡು ಒಂದು ಮಹಾ ರೋಗವನ್ನು ಹುಟ್ಟಿ ಹಾಕಬಹುದು. ಸಾಧ್ಯತೆ ಅಪರಿಮಿತ. ಹೀಗಿರುವ ಪರಿಸ್ಥಿತಿಯಲ್ಲಿ ಮನುಕುಲ ಇಂಥದ್ದೊಂದು ಮುಂದೆ ಬರಬಹುದಾದ ಅವಘಡಗಳಿಗೆ ಸನ್ನದ್ಧವಾಗಲೇ ಬೇಕು. ಇದನ್ನು ಒಂದೋ ಎರಡೂ ದೇಶ ಕೈಗೆತ್ತಿಕೊಳ್ಳುವುದಕ್ಕಿಂತ ಜಗತ್ತಿನ ಎಲ್ಲ ದೇಶಗಳು ಕೈಜೋಡಿಸುವ ಅವಶ್ಯಕತೆಯಿದೆ.

ವೈರಸ್ ಬ್ಯಾಕ್ಟೀರಿಯಾ ಮೊದಲಾದ ಸೂಕ್ಷ್ಮಾಣು ಜೀವಿಗಳ ಅವಶ್ಯಕತೆ ಕೂಡ ಮನುಷ್ಯನಿಗಿದೆ. ಇವಿರದೆ ಮನುಷ್ಯ ಬದುಕಲು ಸಾಧ್ಯವೇ ಇಲ್ಲ. ಅದೇ ಸಮಯದಲ್ಲಿ ಮನುಷ್ಯನನ್ನೇ ನಿರ್ನಾಮ ಮಾಡಬಲ್ಲ ತಾಕತ್ತು ಕೂಡ ಇವಕ್ಕಿದೆ. ಒಮ್ಮೆ ಇವುಗಳ ಕೈ ಮೇಲಾಗುತ್ತದೆ, ಇನ್ನೊಮ್ಮೆ ಮನುಷ್ಯ ತನ್ನ ವೈಜ್ಞಾನಿಕ ಶಕ್ತಿಯಿಂದ ಇವನ್ನು ಮೆಟ್ಟಿ ನಿಲ್ಲುತ್ತಾನೆ. ಅದೇ ಸಮಯದಲ್ಲಿ ಮತ್ತೊಂದು ರಾಕ್ಷಸ ಸಾದೃಶ ವೈರಸ್ ಅಥವಾ ಸೂಕ್ಷ್ಮಾಣು ಜೀವಿ ಹೊಸ ರೋಗವೊಂದನ್ನು ಜನನಕ್ಕೆ ಕಾರಣವಾಗುತ್ತದೆ. ಇದೆಲ್ಲವನ್ನು ಮನುಷ್ಯ ನಿರ್ಮಿತ ವಿಕೃತಿ ಎನ್ನುವುದಕ್ಕಿಂತ ಇದುವೇ ನಮ್ಮ ಸುತ್ತಲಿನ ಪ್ರಕೃತಿ ಎಂಬ ಸೂಕ್ಷ್ಮವನ್ನು ಅರಿಯಬೇಕು. ಈ ಸೂಕ್ಷ್ಮಾಣು ಜೀವಿಗಳೊಂದಿಗಿನ ಹೋರಾಟ ನಿತ್ಯ ನಿರಂತರ. ಯುದ್ಧಕ್ಕೆ ನಾವು ತಯಾರಿ ನಡೆಸುತ್ತಲೇ ಇರಬೇಕು ಮತ್ತು ಗೆಲ್ಲುತ್ತಲೇ ಮುಂದೆ ಸಾಗಬೇಕು. ಇದು ನಿರಂತರ ಯುದ್ಧ. ಅಂದಹಾಗೆ ಮೊದಲು ಹೇಳಿದ Contagion ಎಂಬ ಚಲನಚಿತ್ರವನ್ನು ಒಮ್ಮೆ ನೀವು ನೋಡಲೇ ಬೇಕು.

ನಿನ್ನ ಪ್ರೇಮದ ಪರಿಯ...

ಲಹರಿ

ಸುಹಾಸಿನಿ

vveditoped@gmail.com

ಒರಟಾದ ಮುಂಗೈಯನ್ನು ಮುಂದೆಯೊಡ್ಡಿ ಹಲ್ಲುಕಚ್ಚಿಹಿಡಿದಿದ್ದ ನಿನ್ನ ಹಣೆಯಲ್ಲಿ ಸಣ್ಣನೆಯ ಬೆವರು. ಪಕ್ಕದಲ್ಲೇ ನಾನು ಕಣ್ಣೀರಾಕುತ್ತಾ ನಡುಗುತ್ತಿದ್ದೆ. ಬೇಡ ಕಣೋ ಎಂದರೂ ಕೇಳದೆ 'ಮಧು' ಎಂಬ ಹೆಸರಿನ ಜತೆಗೆ ಎರಡು ಪುಟ್ಟ ಹೃದಯಗಳ ಹಚ್ಚೆ ಹಾಕಿಸಿಕೊಂಡು ಬಣ್ಣ ತುಂಬಿಸಿಕೊಳ್ಳುತ್ತಿದ್ದ ನಿನ್ನ ಕಂಗಳಲ್ಲಿ ಎಷ್ಟೊಂದು ಪ್ರೀತಿಯಿತ್ತು. ನೋಡೇ ಮಧೂ... ನಾನು ಸಾಯುವಾಗಲೂ ನೀನು ನಂಜೊತೆನೇ ಇರ್ತೀಯ ಕಣೆ..ನಿನ್ನ ಒಂದು ಕ್ಷಣ ಕೂಡಾ ಬಿಟ್ಟಿರಲಾಗಲ್ಲ ನನ್ನ ಕೈಲಿ.. ಎಂದು ನೀನು ಎದೆಯುಬ್ಬಿಸಿ ಹೇಳುತ್ತಿದ್ದರೆ ಅಕ್ಕಪಕ್ಕದಲ್ಲಿ ಜನರಿದ್ದಾರೆ ಎಂಬುದನ್ನು ಗಮನಿಸದೆ ನಿನ್ನ ಕತ್ತಿನ ಸುತ್ತ ಕೈಬಳಸಿ ಅಪ್ಪಿಕೊಂಡು ಬಿಕ್ಕಿದ್ದೆ. ಪ್ರೀತಿ ಎಂದರೆ ಹಾಗೇ ಅಲ್ಲವೇನೋ ಹುಡುಗ... ಪ್ರೀತಿಸಿದ ಜೀವವೊಂದರ ಹೊರತಾಗಿ ಬೇರೆಲ್ಲದರೆಡೆಗೂ ಕುರುಡಾಗಿಬಿಡುವುದು... ನಿನ್ನದೊಂದು ಸಂದೇಶವಿಲ್ಲದೆ ನನ್ನ ಮುಂಜಾನೆಗಳು ಬಿಚ್ಚಿಕೊಳ್ಳುತ್ತಲೇ ಇರಲಿಲ್ಲ. ನೀನು ಗುಡ್ ನೈಟ್ ಹೇಳಿ ಕಳಿಸುವ ನಿನ್ನ ಮುತ್ತನ್ನು ಜತೆಗೆ ಹೊತ್ತು ತರುವ ಪುಟ್ಟ ಇಮೋಜಿಯಿಲ್ಲದೆ ನನ್ನ ರಾತ್ರಿಗಳು ಮುಗಿಯುತ್ತಲೇ ಇರಲಿಲ್ಲ. ನನ್ನೂರಿನ ಗಿಡಮರಗಳಲ್ಲಿ ಬಣ್ಣಬಣ್ಣದ ಹೂಗಳರಳಿ ನಗುತ್ತಿದ್ದವು,ಡಿಊರಿನ ತುಂಬಾ ಒಲವಿನ ತೇರು ಹೊರಟಂತೆ ಕಾಣಿಸುತ್ತಿತ್ತು. ಕಾಲೇಜಿನ ಐದು ವರ್ಷಗಳು ಕಳೆದದ್ದೆ ತಿಳಿಯಲಿಲ್ಲ ಕಣೋ ಹುಡುಗಾ, ಕ್ಲಾಸಿನಲ್ಲಿ ನನ್ನ ಪುಟ್ಟ ಅಂಗೈ ಮೇಲೆ Love you ಎಂದು ಬರೆದುಕೊಂಡು ಎಲ್ಲರ ಕಣ್ತಪ್ಪಿಸಿ ನಿನ್ನ ಕಡೆ ಕೈ ಬಿಡಿಸಿ ಪುಳಕಗೊಳ್ಳುತ್ತಿದ್ದ ದಿನಗಳನ್ನು ಹೇಗೆ ಮರೆಯಲೀ ? ನಿನ್ನ ಬೈಕಿನ ಹಿಂಬದಿಯಲ್ಲಿ ಪುಟ್ಟ ಗುಬ್ಬಿಯಂತೆ ಅವುಚಿಕುಳಿತು ಗಾಳಿಗೂ ಪಿಸುಮಾತು ಕಲಿಸುತ್ತಿದ್ದ ಪರಿಯ ಏನೆಂದು ವಿವರಿಸಲಿ..?

ಹೊಸ ಹುಡುಗಿಯೊಬ್ಬಳಿಗೆ ಕಾಲೇಜಿನ ಪ್ರಿನ್ಸಿ ರೂಮು ತೋರುತ್ತಿದ್ದ ನಿನ್ನ ಬಗ್ಗೆ ತಪ್ಪು ತಿಳಿದುಕೊಂಡು ಎರಡು ದಿನ ಮಾತುಬಿಟ್ಟು ಒಳಗೊಳಗೆ ಅನುಭವಿಸಿದ ವೇದನೆಯನ್ನು ಹೇಗೆ ಬಣ್ಣಿಸಲಿ? ಐಸ್ ಕ್ರೀಂ ಪಾರ್ಲರ್‌ನ ಮೂಲೆಯ ಕೋಣೆಯಲ್ಲಿ ಕಣ್ ಕಣ್ಣ ಸಲಿಗೆಯಲ್ಲೇ ನೀನು ಮಾತಾಗುತ್ತಿದ್ದರೆ ನಾನು ತಣ್ಣಗೆ ರೆಕ್ಕೆ ಬಿಚ್ಚಿ ಬೀಸುವ ಫ್ಯಾನ್ ಗಾಳಿಯಂತೆ ತಲೆದೂಗುತ್ತಿದ್ದೆ. ಅವೆಲ್ಲ ಹೇಗೆ ಮರೆಯಲಿ ಗೆಳೆಯಾ? ಎಷ್ಟೆಲ್ಲಾ ಹಿತವಾದ ದಿನಗಳು ಕೈಯ ಗಾಜಿನ ಬಟ್ಟಲೊಳಗಿದ್ದ ಐಸ್ ಕ್ರೀಂನಂತೆ ಕರಗಿಯೇ ಹೋದವಲ್ಲ..! ಕಾಲೇಜಿನ ಕೊನೆಯ ದಿನ ಕಣ್ಣಹನಿಗಳಿಗೆ ವಿರಾಮ ಘೋಷಿಸದೆ ಸುಮ್ಮನೆ ನಿನ್ನ ಹೆಗಲುತಬ್ಬಿ ಬಿಕ್ಕುತ್ತಿದ್ದ ನನ್ನ ನೀ ಸಂತೈಸುತ್ತಿದ್ದೆಯೋ ನೀನೇ ಕಣ್ಣೀರಾಗಿದ್ದೆಯೋ ನಾನು ಗಮನಿಸದೆ ಹೋದೆ. ಮನೆಯಲ್ಲಿ ಮದುವೆಯ ಮಾತುಕತೆ ನಡೆದಿದೆ ಕಣೋ..ಎಂದವಳ ಧ್ವನಿಯಲ್ಲಿ ಉಸಿರೇ ಇರಲಿಲ್ಲ. ಭವಿಷ್ಯದ ಬಗ್ಗೆ ಯೋಚಿಸದೆ ಪ್ರೇಮದಲ್ಲಿ ಮುಳುಗಿದ್ದೇ ತಪ್ಪಾಯಿತೇನೋ ಕಣೋ ಹುಡುಗಾ, ಮುಂದೇನು ಎಂಬ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ, ನಿನ್ನಲ್ಲಿ ಮೊದಲೇ ಇರಲಿಲ್ಲ. ಇನ್ನೊಂದು ಐದು ವರ್ಷ ಕಾಯಲಿಕ್ಕಾಗುವುದಿಲ್ಲವಾ ಚಿನ್ನು.. ಎಂದವನ ಧ್ವನಿಯೊಳಗಿದ್ದ ಅಭದ್ರತೆ ನನ್ನ ಕೆನ್ನೆಗೆ ತಾಕುವಷ್ಟಿತ್ತು. ಭೇಟಿಯೇ ಆಗಬಾರದಿತ್ತು ಕಣೋ ನಿನ್ನನ್ನು. ಅಥವಾ ಹೇಳಿಯೇಬಿಡಬೇಕಿತ್ತು, ಹುಟ್ಟಿದಾಗಲೇ ಜತೆಗಾರನೊಬ್ಬನಿಗೆ ಹೆಸರಿಟ್ಟು ಡಿಗ್ರಿ ಮುಗಿಯಲಿ ಮದುವೆ ಮಾಡೋಣ ಎಂದು ಮನೆಯವರು ಕಾಯುತ್ತಿದ್ದರೆಂದು. ಎಳೆಕೆನ್ನೆಯ ಮೇಲೆ ಚಿಗುರೊಡೆಯುತ್ತಿದ್ದ ಗಡ್ಡದ ಹುಡುಗನ ಕಡೆಗಿನ ಸೆಳೆತ ನನ್ನ ನಾನೇ ಮರೆತು ಪ್ರೇಮಿಸುವಂತೆ ಮಾಡಿಬಿಟ್ಟಿತ್ತು. ಅದೆಷ್ಟು ಕನಸು ಗಳಿದ್ದವು ಕಂಗಳೊಳಗೆ, ಎಲ್ಲದಕ್ಕೂ ತಿಲಾಂಜಲಿಯಿಕ್ಕಿ ನಡೆದುಬಿಡಲೇ ಹಸೆಮಣೆಯೆಡೆಗೆ.. ನಿನ್ನ ಮಧು.

ಭಟ್ಟರ್ ಸ್ಕಾಚ್

- **ಗಾಯತ್ರಿ ನಾಗರಾಜ, ಭೈರಸಂದ್ರ**

ಭಟ್ರೇ, ನೀವು ವಿದೇಶಕ್ಕೆ ತೆರಳಿ ಬಹಳ ದಿನಗಳಾಯ್ತಲ್ಲ?

- ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಘೋಷಿಸಿಯೇ ವಿದೇಶಕ್ಕೆ ಹೋಗಬೇಕು ಎಂಬ ನಿಯಮವೇನಾದರೂ ಇದೆಯಾ?!

- **ಶಶಿ ಯಡ್ರಾಮಿ, ಬೆಂಗಳೂರು**

ಬಂದ್ ಮಾಡುವುದರಿಂದ ಸಮಸ್ಯೆ ಬಗೆಹರಿಯುತ್ತದಾ?

- ಹಾಗಿದ್ದಿದ್ದರೆ ಹೆಂಡತಿಯರು ಮನೆಯಲ್ಲಿ ಅದನ್ನೇ ಮಾಡುತ್ತಿದ್ದರು!

- **ಸಿದ್ದೇಶ ಬಂಡಿಹಟ್ಟಿ, ಹುಬ್ಬಳ್ಳಿ**

ಹುಬ್ಬಳ್ಳಿಯಲ್ಲಿ ಯಾರಾದ್ರೂ ಬಂಡವಾಳ ಹೂಡುತ್ತಾರೆ ಅಂತ ಅನಿಸುತ್ತಾ?

- ಹೂಡ್ತಾರೋ ಬಿಡ್ತಾರೋ, ಆದರೆ ಕೆಲವರ ಬಂಡವಾಳ ಬಯಲಾಗೋದು ಮಾತ್ರ ಗ್ಯಾರಂಟಿ!

- **ರಾಜೇಶ ಶಂಕರ, ಜಯನಗರ**

ಈಶ್ವರಪ್ಪ ಮತ್ತು ಸಿದ್ದರಾಮಯ್ಯ ಯಾಕೆ ಸದಾ ಜಗಳ ಆಡ್ತಾರೆ?

- ಜಗಳ ಅಲ್ಲ ಅದು, ಅತಿಯಾದ ಪ್ರೀತಿಯಂತೆ!

- **ಸ್ವಾತಿ (ಇಮೇಲ್ ಮೂಲಕ)**

ಒಂದು ಷರತ್ತು, ನನ್ನ ಗಂಡನಾಗುವವನು ನನ್ನ ಮಾತನ್ನು ಮೀರಬಾರದು, ಅದಕ್ಕೇನು ಮಾಡಬೇಕು ಭಟ್ರೇ?

- ಅದು ಷರತ್ತಲ್ಲ ಪೆದ್ದಿ, ಅದು ನಿಯಮ. ಹೆಂಡತಿ ಮಾತನ್ನು ಮೀರುವ ಗಂಡನಿದ್ದಾನಾ?!

- **ರಾಜು ಪತ್ತಾರ, ಹುಬ್ಬಳ್ಳಿ**

ಭಟ್ರೇ, ನೀವ್ಯಾಕೆ ಒಂದು ಹೋಟೆಲನ್ನು ಆರಂಭಿಸಬಾರದು?

- ಈಗ ಮಾಡುತ್ತಿರುವುದೇನು ಅಂತ ಅಂದುಕೊಂಡೆ? ಪ್ರತಿ ದಿನ ಅಕ್ಷರಗಳನ್ನು ಉಣಿಸುತ್ತಿಲ್ಲವೇ?

- **ಮಧುರಾ ಕಾಮತ, ಮೈಸೂರು**

ಹೆಂಗಸರು ಟಿಕ್‌ಟಾಕ್‌ನಲ್ಲಿ ಕಾಲಕಳೆಯುತ್ತಾರಲ್ಲ?

- ಇನ್ನು ಧಾರಾವಾಹಿಗಳನ್ನು ತೋರಿಸುವ ಆ ಟಿವಿ ಚಾನೆಲ್ಲುಗಳ ಕತೆಯೇನು?!

- **ಕೇಶವ ನಾಡಿಗ, ಹಾವೇರಿ**

ನಿಖಿಲ್ ಕುಮಾರಸ್ವಾಮಿ ಮದುವೆ ನೂರು ಎಕರೆ ಮೈದಾನದಲ್ಲಿ ಆಗುತ್ತಂತೆ ಹೌದಾ?

- ಮದುವೆ ಎಲ್ಲಿಯೇ ಆದರೂ, ಅದು ಮಾತ್ರ ಆರಡಿ-ಎಂಟಡಿ ಮೇಲೇ!

- **ಕೃಷ್ಣಾನಂದ ಜೋಶಿ, ಯಲ್ಲಾಪುರ**

ಲಾಟರಿ ಹೊಡೆಯೋದು ಅಂದ್ರೆ ಏನು?

- ಸಚಿವ ಆಸರೆ ಕೊಡಿ ಅಂದ್ರೆ, ರಾಜ್ಯದಲ್ಲಿರುವ ಮರಗಳ ಉಸ್ತುವಾರಿ ಇರುವ ಅರಣ್ಯ ಖಾತೆ ಕೊಡೋದು!

- **ಮಂಗಳಾ ಭಟ್, ಪದ್ಮನಾಭನಗರ**

ಸಿನಿಮಾ ನಟರಿಗೇಕೆ ಆ ಪರಿ ಬಾಡಿಗಾರ್ಡ್ ಗಳು?

- ಸುಮ್ನೆ ಷೋಕಿ ಮಾಡೋಕೆ ವೇಸ್ಟ್ ಬಾಡಿಗಳಾದರೂ ಬೇಕಲ್ಲ!

ಆಟೋಮೊಬೈಲ್ ಉದ್ಯಮದಲ್ಲಿ ಸಂಚಲನ ಸೃಷ್ಟಿಸಿದ ಮಾರುತಿ



ಅಭಿವ್ಯಕ್ತಿ

ರಮಾನಂದ ಶರ್ಮಾ

ramanandsharma28@gmail.com

2014ರಲ್ಲಿ ಮಾರುತಿ -800 ಉತ್ಪಾದನೆಯನ್ನು ನಿಲ್ಲಿಸಿ ಅದನ್ನು ಮಾರುತಿ ಆಲ್ಟೋ 800ಗೆ ಪರಿವರ್ತಿತ ಆಗುವವರೆಗೆ ದೇಶದಲ್ಲಿ 2.7 ಮಿಲಿಯನ್ ಕಾರುಗಳು ಮಾರಾಟವಾಗಿದ್ದವು.

ಭಾರತದ ಆಟೋಮೊಬೈಲ್ ಉದ್ಯಮದಲ್ಲಿ ಡಿಸೆಂಬರ್ 14, 1983 ಒಂದು ಸ್ಮರಣೀಯ ದಿನ. ಅಂಬಾಸೆಡರ್, ಪ್ರೀಮಿಯರ್ ಪದ್ಮಿನಿ ಮತ್ತು ಸ್ಟ್ಯಾಂಡರ್ಡ್ ಕಾರುಗಳಿಗೆ ಸೀಮಿತವಾಗಿ ಭಾರತದ ಆಟೋಮೊಬೈಲ್ ಮಾರುಕಟ್ಟೆಗೆ ಭಾರತೀಯ ಪ್ರಯಾಣಿಕರ ಕಾರು ಮಾರುತಿ ಪ್ರವೇಶ ಮಾಡಿದ ದಿನ. ಅವರೆಗೆ ಕೇವಲ ಉಳ್ಳವರ ವಾಹನವಾಗಿದ್ದ ಕಾರು ಜನಸಾಮಾನ್ಯರ ಮತ್ತು ಮಧ್ಯಮ ವರ್ಗದವರ ಪೋರ್ಟಿಕೋದಲ್ಲಿ ಕಾಣಿಸಿಕೊಂಡ ದಿನ. ಅವರ ಬದುಕಿನಲ್ಲಿ ತಲೆಯ ಮೇಲೊಂದು ಸೂರು ಕನಸಿನ ಸಂಗಡ ಸ್ವಂತ ವಾಹನವೂ ಸೇರಿಕೊಂಡ ಸಂಭ್ರಮ.

ಮಾರುತಿ ಕಾರು ಇಂದಿರಾ ಗಾಂಧಿಯವರ ಪುತ್ರ ಸಂಜಯ ಗಾಂಧಿಯವರ ಕನಸಿನ ಕೂಸು. ತಮ್ಮ ಪರಿಕಲ್ಪನೆಯನ್ನು ಹುಟ್ಟು ಹಾಕಿದಾಗ ಈ ಸಣ್ಣ ಕಾರು ಯೋಜನೆಯನ್ನು ಹುಚ್ಚುಕೋಡಿ ಮನಸ್ಸಿನ ಅತಿರೇಕ ಎಂದು ಕೆಲವು ಉದ್ಯಮಿಗಳು ಸೇರಿದಂತೆ ಹಲವರು ಬಣ್ಣಿಸಿದ್ದರು. ಕಾರು ಉತ್ಪಾದನೆ ಮಕ್ಕಳಾಟವೇ ಎಂದು ಲೇವಡಿ ಮಾಡಲಾಗಿತ್ತು. 50000 ರುಪಾಯಿಗೆ ಪ್ಯಾಸೆಂಜರ್ ಕಾರ್ ಸಾಧ್ಯವೇ? ಎಂದು ಹುಬ್ಬೇರಿಸಲಾಗಿತ್ತು. ಅಂದಿನ ಸಮಾಜವಾದಿಗಳು ಇಂದಿರಾ ಗಾಂಧಿಯವರು ತಮ್ಮ ಮಗನನ್ನು ರಾಜಕೀಯದಲ್ಲಿ ಮಂದಕ್ಕೆ ತರಲು ಈ ಯೋಜನೆಯನ್ನು ಹುಟ್ಟು ಹಾಕಿದ್ದಾರೆಂದು ಭಾರಿ ಕೋಲಾಹಲ ಸೃಷ್ಟಿಸಿದ್ದರು. ಸಂಸತ್ತಿನಲ್ಲೂ ಈ ವಿಷಯ ಗಂಭೀರ ಚರ್ಚೆಗೆ ಒಳಗಾಗಿತ್ತು. ಅವರ ಪ್ರಯತ್ನವನ್ನು ಸ್ವಾಗತಿಸುವವರಿಗಿಂತ ಟೀಕಿಸುವವರೇ ಹೆಚ್ಚು ಕಾಣುತ್ತಿದ್ದರು. ಈ ಯೋಜನೆಯನ್ನು ಹಳಿತಪ್ಪಿಸಲು ಭಾರಿ ಪ್ರಯತ್ನ ಮಾಡಲಾಗಿತ್ತು. ಆದರೂ ಎದೆಗುಂದದೆ ಸಂಜಯ ಗಾಂಧಿಯವರು, ಛಲಬಿಡದ ವಿಕ್ರಮನಂತೆ ಡಿಸೆಂಬರ್ 14, 1983 ರಂದು ತಮ್ಮ ಕನಸಿನ ಮಾರುತಿ ಕಾರನ್ನು ದೇಶದ ಜನತೆಯ ಮುಂದೆ ಅನಾವರಣ ಮಾಡಿದಾಗ ಇಡೀ ದೇಶವೇ ಬೆಕ್ಕಸ ಬೆರಗಾಗಿತ್ತು. ಅವರ ರಾಜಕೀಯ ವೈರಿಗಳು ಕೂಡ ತಮ್ಮ ರಾಜಕೀಯ ಸಿದ್ಧಾಂತ, ಪಕ್ಷಭೇದ ಮತ್ತು ವೈರತ್ವ ಮರೆತು ಸಂಜಯ ಗಾಂಧಿಯವರ ಸಾಹಸವನ್ನು ಮನಸಾರೆ ಒಪ್ಪಿದರು. ಅವರ ರಾಜಕೀಯವನ್ನು ಟೀಕಿಸಿದವರು ಅವರ ಸಾಹಸವನ್ನು ಹೃತ್ಪೂರ್ವಕವಾಗಿ ಪ್ರತಿಯೊಬ್ಬರೂ ಕೊಂಡಾಡಿದರು.

ಅಂದಿನ ದಿನಗಳಲ್ಲಿ ದ್ವಿಚಕ್ರ ವಾಹನಗಳಲ್ಲಿ ಬಜಾಜ್ ಚೇತಕ್ ಮಾಡಿದ ಮೋಡಿಯನ್ನು, ನಾಲ್ಕು ಚಕ್ರಗಳ ವಾಹನಗಳ ವಿಭಾಗದಲ್ಲಿ ಮಾರುತಿ ಕಾರು ಒಂಡೆರಡು ವರ್ಷಗಳಲ್ಲಿಯೇ ಮಾಡಿತು. ಚೇತಕ್ ಸ್ಕೂಟರ್‌ನಂತೆ, ಮಾರುತಿ ಕಾರು ಕೂಡ ಮದುವೆಯ ವರದಕ್ಷಿಣೆಯ ಭಾಗವಾಗುವಷ್ಟು ಅನಿವಾರ್ಯತೆ ಸೃಷ್ಟಿಯಾಗಿತ್ತು! ಮದುವೆಗಳಲ್ಲಿ ವರ ಮಾರುತಿ ಕಾರನ್ನೇ ವರದಕ್ಷಿಣೆಯಾಗಿ ಕೇಳುವಷ್ಟು ಮಾರುತಿ ಕಾರು ಜನಮಾನಸದಲ್ಲಿ ಬೆರೆಯಿತು. ಮಾರುತಿ ಕಾರನ್ನು ಡ್ರೈವ್ ಮಾಡುವುದು ಹೆಮ್ಮೆಯ ಮತ್ತು ಪ್ರತಿಷ್ಠೆಯ ಸಂಕೇತವಾಯಿತು. ಇಕ್ಕಟ್ಟಾದ ರಸ್ತೆಯಲ್ಲಿ, ಪಾರ್ಕಿಂಗ್ ಸ್ಥಳದಲ್ಲಿ ಸುಲಭವಾಗಿ ಪಾರ್ಕ್ ಮಾಡುವ, ಉತ್ತಮ ಮೈಲೇಜ್ ನೀಡುವ , ನಿರ್ವಹಣಾ ವೆಚ್ಚ ಉಳಿದ ವಾಹನಗಳಿಗೆ ಹೋಲಿಸಿದರೆ ತುಸು ಕಡಿಮೆ ಇರುವ ಈ ವಾಹನ, ಸ್ವಲ್ಪ ಸಮಯದಲ್ಲಿಯೇ ರಸ್ತೆಗಳನ್ನು ಅಕ್ರಮಿಸಿತು. ನೀರಿಲ್ಲದ ಊರಿನಲ್ಲಿ, ರಸ್ತೆ ಬದಿಗಳಲ್ಲಿ ಕಾಣುವ ಸರ್ವೀಸ್ ಸೆಂಟರ್‌ಗಳು ಮಾರುತಿಯನ್ನು ಇನ್ನೂ ಪ್ರಸಿದ್ಧಿಗೊಳಿಸಿದವು. ಅವರ ಈ ಜಾಹೀರಾತು ಅಂದಿನ ದಿನಗಳಲ್ಲಿ ಮನೆಮಾತಾಗಿತ್ತು.

ಮಾರುತಿ ಕಾರ್‌ಗೆ ಈಗ 37ವರ್ಷಗಳು. ಈವರೆಗೆ 20 ಮಿಲಿಯನ್ ಕಾರ್‌ಗಳು ಮಾರಾಟವಾಗಿವೆ. ಯಾವುದೇ ಕಾರು ಉತ್ಪಾದನಾ ಸಂಸ್ಥೆಗೆ ಇದೊಂದು ಹೆಮ್ಮೆ ಪಡುವ ವಿಷಯ. ಅದು ತನ್ನ ಮೊದಲ 10 ಮಿಲಿಯನ್ ಕಾರುಗಳನ್ನು ಮಾರಲು 29 ವರ್ಷಗಳನ್ನು ತೆಗೆದುಕೊಂಡರೆ , ಉಳಿದ 10ಮಿಲಿಯನ್ ಕಾರುಗಳನ್ನು ಕೇವಲ 8 ವರ್ಷಗಳಲ್ಲಿ ರೆಕಾರ್ಡ್ ಟೈಂನಲ್ಲಿ ಮಾರಾಟ ಮಾಡಿದೆ. ಮಾರುತಿ ಭಾರತದಲ್ಲಿ ಪ್ರತಿಯೊಂದು ಕುಟುಂಬವೂ ಕಾರ್‌ಗಳನ್ನು ಹೊಂದಬೇಕು ಎನ್ನುವ ತನ್ನ ಮಹಾನ್ ಗುರಿಯತ್ತ ಬಹುದೂರ ಸಾಗಿದಂತೆ ಕಾಣುತ್ತದೆ.

• ಯಶಸ್ಸಿನ ಹಿಂದಿನ ಗುಟ್ಟು

ಮಾರುತಿ ಕಾರು ರಸ್ತೆಯಲ್ಲಿ ಕಾಣುವವರೆಗೆ, ಭಾರತದಲ್ಲಿ ಕಾರುಮಾರುಕಟ್ಟೆ 2-3 ಕಂಪನಿಗಳಿಗೆ ಮತ್ತು ಬ್ರ್ಯಾಂಡ್‌ಗಳಿಗೆ ಸೀಮಿತವಾಗಿತ್ತು. ಉಳ್ಳವರು ಮಾತ್ರ ಕಾರು ಡ್ರೈವ್ ಮಾಡುವ ಸ್ಥಿತಿ ಇತ್ತು. ಈ ವಾಸ್ತವವನ್ನು ಸರಿಯಾಗಿ ಗ್ರಹಿಸಿದ ಮಾರುತಿ, ತನ್ನ ಕಾರಿನ ಬೆಲೆಯನ್ನು ಜನಸಸಾಮಾನ್ಯರ ಮತ್ತು ಮಧ್ಯಮ ವರ್ಗದ ಬಜೆಟ್ ಮತ್ತು ಅವರ ಪರ್ಸ್‌ನ ಹಣಕ್ಕೆ ಅನುಗುಣವಾಗಿ ನಿಗದಿಪಡಿಸಿತು. ಇಂದಿರಾ ಗಾಂಧಿಯವರು ಮೊದಲ ಮಾರುತಿ 800 ಕಾರಿನ ಕೀ ಅನ್ನು ಲಾಟರಿಯಲ್ಲಿ ಅದೃಷ್ಟವಂತನಾದ ಇಂಡಿಯನ್ ಏರ್ ಲೈನ್ಸ್ ಉದ್ಯೋಗಿ ಹರಪಾಲ ಸಿಂಗ್ ಅನ್ನುವವರಿಗೆ ನೀಡುವಾಗ, ಅಂದು ಸಂಜಯ ಗಾಂಧಿಯವರ ಮೊದಲ ಪುಣ್ಯ ತಿಥಿಯಾಗಿದ್ದು, ಇಂದಿರಾ ಗಾಂಧಿಯವರ ಕಣ್ಣು ಒದ್ದೆಯಾಗಿಸಿತ್ತು. ಅಂದಿನ ದಿನ ಮಾರುತಿ ಕಾರಿನ ಬೆಲೆ 52500 ರು. ಆಗಿದ್ದು, ಜನರು ಒಂದು ಲಕ್ಷದವರೆಗೆ ಪ್ರೀಮಿಯಂ ನೀಡಿ ಖರೀದಿಸಲು ಜನರು ತಯಾರಿದ್ದರು.

ಚಿಕ್ಕ ಕಾರು ಮತ್ತು ಮದ್ಯಮ ವರ್ಗದವರ ಕಾರು ಎಂದು ಹಣೆಪಟ್ಟಿಕಟ್ಟಿಕೊಂಡು ಮಾರುಕಟ್ಟೆಗೆ ಪ್ರವೇಶಿಸಿದ ಮಾರುತಿ ಇಂದಿನ ವರೆಗೂ ಮಧ್ಯಮ ವರ್ಗದವರನ್ನು ಕೈ ಬಿಡದೇ, ಅವರನ್ನೇ ಗುರಿಯಾಗಿರಿಸಿ Volume Based ಮಾರುಕಟ್ಟೆ ಹಿಡಿತವನ್ನು ಸಾಧಿಸಿದೆ. ಮೇಲ್ವ ರ್ಗದವರಿಗಾಗಿ ಸ್ವಲ್ಪ ಹೆಚ್ಚು ತುಟ್ಟಿಯ ಬೇರೆ ಮಾಡೆಲ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದರೂ ಅದು ತನ್ನ ಕಂಪನಿಗೆ ತನ್ನ ಕೋರ್ ಆದಾಯದ ಮೂಲವಾದ ಮಧ್ಯಮ ವರ್ಗದ ಆಕರ್ಷಣೆಯಾದ ಮಾರುತಿ 800ನ್ನು ಉಳಿಸಿಕೊಂಡಿದೆ ಮತ್ತು ಅದು ಗ್ರಾಹಕರ ಪರ್ಸ್‌ಗೆ ಅನುಗುಣವಾಗಿ ವಿನ್ಯಾಸವನ್ನೂ ಬದಲಿಸುತ್ತಾ ಹೋಗಿದೆ. 2014ರಲ್ಲಿ ಮಾರುತಿ -800 ಉತ್ಪಾದನೆಯನ್ನು ನಿಲ್ಲಿಸಿ ಅದನ್ನು ಮಾರುತಿ ಅಲ್ಟೋ 800ಗೆ ಪರಿವರ್ತಿತ ಆಗುವವರೆಗೆ ದೇಶದಲ್ಲಿ 2.7 ಮಿಲಿಯನ್ ಕಾರುಗಳು ಮಾರಾಟವಾಗಿದ್ದವು.

ಮಾಜಿ ಪ್ರಧಾನಿ ಮನಮೋಹನ ಸಿಂಗ್ ಮತ್ತು ಕ್ರಿಕೆಟಿಗ ತೆಂಡೂಲ್ಕರ್ ಇನ್ನೂ ಮಾರುತಿ 800ನ್ನು ಇಟ್ಟುಕೊಂಡಿದ್ದಾರಂತೆ. ಎಷ್ಟೋ ಜನರು ನಿರಂತರವಾಗಿ ಬಳಸದಿದ್ದರೂ ಮನೆಯಲ್ಲಿ ನೆನಪಿಗಾಗಿ ಮಾರುತಿ 800ನ್ನು ಇಟ್ಟುಕೊಂಡಿರುವ ಉದಾಹರಣೆಗಳು ಸಾಕಷ್ಟು ಇವೆ. ಮಧ್ಯಮ ವರ್ಗದ ಡಾರ್ಲಿಂಗ್ ಎಂದು ಕರೆಯಲ್ಪಡುವ ಇತ್ತೀಚಿನ ವರ್ಷನ್ ಮಾರುತಿ ಅಲ್ಟೋ 800 ಇದೀಗ 35 ಲಕ್ಷ ಕಾರುಗಳು ಮಾರಾಟವಾಗಿದ್ದು ಮಾರುಕಟ್ಟೆಯಲ್ಲಿ ಶೇ.33ರಷ್ಟು ಪಾಲನ್ನು ಕಬಳಿಸಿದೆಯಂತೆ. ಮೊದಲ ಬಾರಿ ಕಾರನ್ನು ಖರೀದಿಸುವವರಲ್ಲಿ 2017-18ರಲ್ಲಿ ಶೇ.55ರಷ್ಟು ಗ್ರಾಹಕರು ಈ ಕಾರನ್ನು ಖರೀದಿಸಿದ್ದಾರಂತೆ. ಈ ಕಾರಿನ ಬೆಲೆ ಜನಸಾಮಾನ್ಯರಿಗೆ ಹೊಂದಾಣಿಕೆ ಮಾಡಿಕೊಳ್ಳುವಂತಿದೆ. ಸಾಲದ ಮೊತ್ತವೂ ಕಡಿಮೆ ಅಗಿದ್ದು, ಬ್ಯಾಂಕುಗಳು ನಿರಾಯಾಸವಾಗಿ ಸಾಲ ನೀಡಲು ತುಂಬಾ ಅನುಕೂಲಕರವಾಗಿದೆ. ಕೆಳ ಮತ್ತು ಮಧ್ಯಮ ವರ್ಗದ ಮಿತಿಯಾದ 30-40 ಅಳತೆಯ ಮನೆಯ ಪೋರ್ಟಿಕೋದಲ್ಲಿ ಒಪ್ಪವಾಗಿ ಹೊಂದಿಕೊಳ್ಳುವ ಮಾರುತಿ 800, ಮಧ್ಯಮ ವರ್ಗದವರ ಬದುಕಿನ ಟ್ರೆಂಡ್ ಆಗಿ ದಶಕಗಳಾಗಿವೆ. ಉಳ್ಳವರು ಮತ್ತು ಸ್ಥಿತಿವಂತರು ಇದನ್ನು ಸೆಕೆಂಡ್ ಡಿವಿಜನ್ ಕ್ಲಾರ್ಕ್‌ನ ವಾಹನ ಎಂದು ಲೇವಡಿ ಮಾಡಿದರೂ, ಮಾರುತಿ 800 ಅಥವಾ ಮಾರುತಿ-ಅಲ್ಟೋದ ಗತ್ತನ್ನು ಅದರ ಮಾರುಕಟ್ಟೆಯನ್ನು ಯಾರಿಂದಲೂ ಕಸಿಯಲಾಗದು. ಸರಿಯಾಗಿ ಹೊಂದಿಕೊಳ್ಳುವ ಕಪಾಟು ಎಂದರೆ ಗೋದ್ರೆಜ್, ಶೂ ಎಂದರೆ ಬಾಟಾ ಎನ್ನುವಂತೆ ಕಾರ್ ಎಂದರೆ ಮಾರುತಿ ಎನ್ನುವಷ್ಟು ಬ್ರ್ಯಾಂಡ್ ಆಗಿದೆ.

ಮಾರುತಿ ತನ್ನ ಈ ವರೆಗಿನ ಸಾದನೆಯಿಂದ ತೃಪ್ತರಾಗಿ ಕುಳಿತುಕೊಳ್ಳದೇ, ಹೊಸ ಹೊಸ ಮಾಡೆಲ್‌ಗಳನ್ನು ಬಿಡುಗಡೆ ಮಾಡಲು ಯತ್ನಿಸುತ್ತಿದೆ. ಫ್ಯಾಕ್ಟರಿಯಲ್ಲೇ ಫಿಟ್ ಮಾಡಿದ ಸಿಎನ್ಜಿ ವೆಹಿಕಲ್, ಹೈಬ್ರಿಡ್ ವೆಹಿಕಲ್ ಮತ್ತು ಬಿಎಸ್ 6 ಮಾಡೆಲ್ ಕಾರುಗಳನ್ನು ಬಿಡುಗಡೆ ಮಾಡುತ್ತಿದೆ. ತನ್ನ ಮಾತೃಸಂಸ್ಥೆ ಸಹಯೋಗದೊಂದಿದೆ ಎಲೆಕ್ಟ್ರಿಕ್ ವಾಹನಗಳನ್ನೂ ಹೊರತರುತ್ತಿದೆಯಂತೆ. ವಾಹನ ಉದ್ಯಮಗಳ ಸಂಘದ ವರದಿ ಪ್ರಕಾರ ಮಾರುತಿ ಕಂಪನಿ ಪ್ಯಾಸೆಂಜರ್ ಕಾರು ಮಾರುಕಟ್ಟೆಯಲ್ಲಿ 51.25% ಪಾಲು ಹೊಂದಿದೆ. ಯಾವುದೇ ಉದ್ಯಮ ಮದ್ಯಮ ವರ್ಗದವರ ಆಶೋತ್ತರವನ್ನು ಗುರಿಯಾಗಿಸಿಕೊಡರೆ, ಅದು ಉತುಂಗಕ್ಕೇರಬಹುದು ಎನ್ನುವುದು ಮಾರುತಿಯಿಂದ ಇನ್ನೊಮ್ಮೆ ಸಾಬೀತಾಗಿದೆ. ಮಾರುತಿಯ ಇತರ ಮಾಡೆಲ್‌ಗಳು ಕೂಡಾ ಜನಪ್ರಿಯವಾಗಿದ್ದರೂ, ಅದರ ಮಾರುತಿ 800 ಮತ್ತು ಅಲ್ಟೋ 800 ಮಾಡಿದ ಮೋಡಿ ಭಾರತದ ಆಟೋಮೊಬೈಲ್ ಕ್ಷೇತ್ರದಲ್ಲಿ ಅವಿಸ್ಮರಣೀಯ. ಕೆಳ ಮತ್ತು ಮದ್ಯಮ ವರ್ಗದವರ ವಾಹನ ಕನಸನ್ನು ನೆರವೇರಿಸಿದ ಕೀರ್ತಿಯನ್ನು ಮಾರುತಿಯಿಂದ ಯಾರೂ ಕಸಿಯಲಾರರು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವ ನಾಣ್ನುಡಿಯ ಕರ್ತೃರಿಗೆ ಮಾರುತಿ ಕಾರು ಪ್ರೇರಣೆಯಾಗಿರಬೇಕು.